ಈ ಪ್ರಶ್ನೆಪುಸ್ತಿಕೆಯನ್ನು ತೆರೆಯುವಂತೆ ನಿಮಗೆ ತಿಳಿಸುವವರೆಗೂ ಇದನ್ನು ತೆರೆಯಕೂಡದು.

**2018**

**ಪ್ರಶ್ನೆಪತ್ರಿಕೆ ವರ್ಷನ್ ಕೋಡ್**

**A**

# ಪ್ರಶ್ನೆಪತ್ರಿಕೆ

# ನಿರ್ದಿಷ್ಟ ಪತ್ರಿಕೆ

# ಪತ್ರಿಕೆ - II

**ಗರಿಷ್ಠ ಸಮಯ : 2 ಗಂಟೆಗಳು** | **ವಿಷಯ ಸಂಕೇತ : 347** | **ಗರಿಷ್ಠ ಅಂಕಗಳು : 200**

## ಸೂಚನೆಗಳು

1. ಪರೀಕ್ಷೆ ಪ್ರಾರಂಭವಾದ ಕೂಡಲೇ ನಿಮ್ಮ ಪ್ರಶ್ನೆಪತ್ರಿಕೆಯಲ್ಲಿ ಅಮುದ್ರಿತ ಅಥವಾ ಹರಿದಿರುವ ಅಥವಾ ಬಿಟ್ಟುಹೋಗಿರುವ ಪುಟಗಳು ಅಥವಾ ಪ್ರಶ್ನೆಗಳು ಇತ್ಯಾದಿಗಳು ಕಂಡುಬಂದಲ್ಲಿ ನಿಮ್ಮ ಓ.ಎಂ.ಆರ್. ಉತ್ತರಪತ್ರಿಕೆಯಲ್ಲಿ ಮುದ್ರಿತವಾಗಿರುವ ಅದೇ ಶ್ರೇಣಿಯ ಪೂರ್ಣ ಪ್ರಶ್ನೆಪತ್ರಿಕೆಯೊಂದಿಗೆ ಬದಲಾಯಿಸಿಕೊಳ್ಳತಕ್ಕದ್ದು.
2. ಅಭ್ಯರ್ಥಿಯು ಪ್ರಶ್ನೆಪತ್ರಿಕೆಯ ಶ್ರೇಣಿಯು, ತಮ್ಮ ಓ.ಎಂ.ಆರ್. ಉತ್ತರಪತ್ರಿಕೆಯಲ್ಲಿ ಮುದ್ರಿತವಾಗಿರುವ ಅದೇ ಪ್ರಶ್ನೆಪತ್ರಿಕೆಯ ಶ್ರೇಣಿಯಾಗಿರುವುದೇ ಎಂಬುದನ್ನು ಖಚಿತಪಡಿಸಿಕೊಳ್ಳಬೇಕು. ವ್ಯತ್ಯಾಸಗಳು ಕಂಡುಬಂದಲ್ಲಿ, ಸಂವೀಕ್ಷಕರ ಗಮನಕ್ಕೆ ತರುವುದು ಮತ್ತು ಪ್ರಶ್ನೆಪತ್ರಿಕೆಯ ಶ್ರೇಣಿಯು ತಮಗೆ ಹೊಂದುವ (ಅದೇ) ಪ್ರಶ್ನೆಪತ್ರಿಕೆಯಾದ ಮತ್ತು ಓ.ಎಂ.ಆರ್. ಉತ್ತರ ಪತ್ರಿಕೆಯಲ್ಲಿ ಮುದ್ರಿತವಾಗಿರುವ ಶ್ರೇಣಿಯ ಪ್ರಶ್ನೆಪತ್ರಿಕೆಯನ್ನೇ ಪಡೆಯತಕ್ಕದ್ದು.
3. ಪಕ್ಕದಲ್ಲಿ ಒದಗಿಸಿರುವ ಪ್ರಶ್ನೆಪತ್ರಿಕೆಯ ಚೌಕದಲ್ಲೇ ನಿಮ್ಮ ನೋಂದಣಿ ಸಂಖ್ಯೆಯನ್ನು ನಮೂದಿಸಬೇಕು. ಪ್ರಶ್ನೆಪತ್ರಿಕೆಯಲ್ಲಿ ಬೇರೆ ಏನನ್ನೂ ಬರೆಯಬಾರದು.

| ನೋಂದಣಿ ಸಂಖ್ಯೆ | | | | | | |
|---|---|---|---|---|---|---|
| | | | | | | |

4. ಈ ಪ್ರಶ್ನೆಪತ್ರಿಕೆ **100** ಪ್ರಶ್ನೆಗಳನ್ನು ಒಳಗೊಂಡಿರುತ್ತದೆ. ಪ್ರತಿಯೊಂದು ಪ್ರಶ್ನೆಯು **4** ಪ್ರತಿಕ್ರಿಯೆಗಳನ್ನು (ಉತ್ತರಗಳನ್ನು) ಒಳಗೊಂಡಿರುತ್ತದೆ. ನೀವು ಉತ್ತರ ಹಾಳೆಯಲ್ಲಿ ಗುರುತು ಮಾಡಬೇಕೆನಿಸುವ ಉತ್ತರವನ್ನು ಆಯ್ಕೆ ಮಾಡಿಕೊಳ್ಳಿ. ಒಂದು ವೇಳೆ ಅಲ್ಲಿ ಒಂದಕ್ಕಿಂತ ಹೆಚ್ಚು ಸರಿಯಾದ ಉತ್ತರಗಳಿವೆಯೆಂದು ನೀವು ಭಾವಿಸಿದರೆ ನಿಮಗೆ ಅತ್ಯುತ್ತಮವೆನಿಸುವ ಉತ್ತರಕ್ಕೆ ಗುರುತು ಮಾಡಿ. ಏನೇ ಆದರೂ ಪ್ರತಿ ಪ್ರಶ್ನೆಗೆ ನೀವು ಕೇವಲ ಒಂದು ಉತ್ತರವನ್ನು ಮಾತ್ರ ಆಯ್ಕೆ ಮಾಡಬೇಕು.
5. ಎಲ್ಲಾ ಉತ್ತರಗಳನ್ನು ನಿಮಗೆ ಒದಗಿಸಲಾಗಿರುವ ಪ್ರತ್ಯೇಕ ಓ.ಎಂ.ಆರ್. ಉತ್ತರಪತ್ರಿಕೆಯ ಮೇಲೆ ಕೇವಲ **ಕಪ್ಪು ಅಥವಾ ನೀಲಿ ಶಾಯಿಯ ಬಾಲ್ ಪಾಯಿಂಟ್ ಪೆನ್ನಿನಲ್ಲಿ** ಮಾತ್ರ ಗುರುತು ಮಾಡಬೇಕು. ಓ.ಎಂ.ಆರ್. ಉತ್ತರಪತ್ರಿಕೆ ಹಾಳೆಯಲ್ಲಿನ ವಿವರವಾದ ಸೂಚನೆಗಳನ್ನು ಗಮನಿಸುವುದು.
6. **ಎಲ್ಲಾ ಪ್ರಶ್ನೆಗಳಿಗೆ ಸಮಾನ ಅಂಕಗಳು. ಎಲ್ಲಾ ಪ್ರಶ್ನೆಗಳಿಗೆ ಉತ್ತರಿಸಿರಿ. ಪ್ರತಿ ತಪ್ಪು ಉತ್ತರಕ್ಕೆ ಪ್ರಶ್ನೆಗೆ ನಿಗದಿಪಡಿಸಿದ ಅಂಕಗಳ 1/4$^{th}$ (0.25) ರಷ್ಟು ಅಂಕಗಳನ್ನು ಕಳೆಯಲಾಗುವುದು.**
7. ಚಿತ್ತು ಕೆಲಸಕ್ಕಾಗಿ ಹಾಳೆಗಳನ್ನು ಪ್ರಶ್ನೆಪುಸ್ತಿಕೆಯ ಕೊನೆಯಲ್ಲಿ ಸೇರಿಸಲಾಗಿದೆ. ಪ್ರಶ್ನೆಪುಸ್ತಿಕೆಯ ಇನ್ನುಳಿದ ಯಾವ ಭಾಗದಲ್ಲಿಯೂ ನೀವು ಯಾವ ರೀತಿಯ ಗುರುತನ್ನು ಮಾಡತಕ್ಕದ್ದಲ್ಲ.
8. ಪರೀಕ್ಷೆಯ ಮುಕ್ತಾಯವನ್ನು ಸೂಚಿಸುವ ಅಂತಿಮ ಗಂಟೆ ಬಾರಿಸಿದ ತಕ್ಷಣವೇ ಓ.ಎಂ.ಆರ್. ಉತ್ತರಪತ್ರಿಕೆ ಹಾಳೆಯಲ್ಲಿ ಇನ್ನಾವುದೇ ಗುರುತು ಮಾಡುವುದನ್ನು ನಿಲ್ಲಿಸಬೇಕು. ಸಂವೀಕ್ಷಕರು ಬಂದು ನಿಮ್ಮಲ್ಲಿರುವ ಓ.ಎಂ.ಆರ್. ಉತ್ತರಹಾಳೆಯನ್ನು ತಮ್ಮ ವಶಕ್ಕೆ ಪಡೆದುಕೊಂಡು ಲೆಕ್ಕಕ್ಕೆ ತೆಗೆದುಕೊಳ್ಳುವವರೆಗೂ ನಿಮ್ಮ ನಿಮ್ಮ ಆಸನದಲ್ಲಿಯೇ ಕುಳಿತಿರತಕ್ಕದ್ದು.

**ಯಾವುದೇ ರೀತಿಯ ಮೊಬೈಲ್ ಫೋನ್, ಕ್ಯಾಲ್ಕ್ಯುಲೇಟರ್ ಮತ್ತು ಇತರೆ ರೀತಿಯ ಎಲೆಕ್ಟ್ರಾನಿಕ್ / ಕಮ್ಯೂನಿಕೇಷನ್ ಸಾಧನಗಳು ಇತ್ಯಾದಿಗಳನ್ನು ಪರೀಕ್ಷಾ ಕೇಂದ್ರದ ಆವರಣದೊಳಗೆ ತರುವುದನ್ನು ನಿಷೇಧಿಸಿದೆ.**



***Note :*** *English version of the instructions is printed on the back cover of this booklet.*

1. "ಇನ್ನಾತನೆ ನರ್ತಕಂ ನಟರೊಳಗ್ಗಳಂ ಈ ಭುವನಾನ್ತರಾಳದೊಳ್" ಈ ಸಾಲು ಕಂಡುಬರುವ ಶಿಲಾಶಾಸನ.
   (1) ತಮಟಗಲ್ಲು ಶಾಸನ
   (2) ಸಿರಗುಂದ ಶಾಸನ
   (3) ಪಟ್ಟದ ಕಲ್ಲು ಶಾಸನ
   (4) ಮಂಗಲೀಶನ ಶಾಸನ

2. ಹಲ್ಮಿಡಿ ಶಾಸನದಲ್ಲಿ ಬಳಸಲಾಗಿರುವ ಈ ಸಮಾಸ ಪದವು ಕನ್ನಡ ಸಂಸ್ಕೃತಗಳ ಚಿರಕಾಲದ ಸಂಬಂಧಕ್ಕೆ ಸಾಕ್ಷಿಯಾಗಿದೆ.
   (1) ಸಿಂಘಮನ್
   (2) ಬಿಟ್ಟವೋಲ್
   (3) ಪೆತ್ತಜಯನ್
   (4) ಕೆಯ್ವೊರಾರ್

3. 'ಕರ್ಣಾಟಕಾ ಮಹಿಷಕಾ ವಿಕಲ್ಪಾ ಮೂಷಕಾಸ್ತಥಾ' ಎಂಬ ಉಲ್ಲೇಖ ಇಲ್ಲಿ ಬರುತ್ತದೆ.
   (1) ಮಹಾಭಾರತ
   (2) ಕವಿರಾಜಮಾರ್ಗ
   (3) ಗಾಥಾಸಪ್ತಶತಿ
   (4) ವಡ್ಡಾರಾಧನೆ

4. ತುಂಬಲೂರಾಚಾರ್ಯರ ವ್ಯಾಖ್ಯಾನ ಗ್ರಂಥದ ಹೆಸರೇನು?
   (1) ಪ್ರಭಾತ
   (2) ಹರಿವಂಶ
   (3) ಚೂಡಾಮಣಿ
   (4) ಕರ್ನಾಟಕ ಕುಮಾರ ಸಂಭವ

5. ಶಾಸನ ಕವಿಯಾದ ರವಿಕೀರ್ತಿ ಯಾರ ಆಸ್ಥಾನದಲ್ಲಿದ್ದನು?
   (1) ಇಮ್ಮಡಿ ಪುಲಕೇಶಿ
   (2) ವಿಷ್ಣುವರ್ಧನ
   (3) ಕಪ್ಪೆ ಆರಭಟ್ಟನ್
   (4) ನೃಪತುಂಗ

6. ಗಂಗವಂಶದ ಪ್ರಸಿದ್ಧ ದೊರೆ ಹಾಗೂ ಸಾಹಿತಿಯಾದ ದೊರೆಯ ಹೆಸರೇನು?
   (1) ರಾಚಮಲ್ಲ (2) ಮಾರಸಿಂಹ
   (3) ಬೂತಗ (4) ದುರ್ವಿನೀತ

7. 'ಗಜಾಷ್ಟಕ' ಕೃತಿಯ ಕರ್ತೃ
   (1) ಶಿವಕೋಟ್ಯಾಚಾರ್ಯ
   (2) ಸೈಗೊಟ್ಟ ಶಿವಮಾರ
   (3) ಚಾವುಂಡರಾಯ
   (4) ಬೊಪ್ಪಣ ಪಂಡಿತ

8. ಹಸ್ತಿಮಲ್ಲಿಯ 'ಪೂರ್ವ ಪುರಾಣ' ಕೃತಿಯು ಈ ಕೆಳಗಿನ ಯಾವ ಕೃತಿಯನ್ನು ಹೋಲುತ್ತದೆ?
   (1) ಆದಿಪುರಾಣ
   (2) ಅಜಿತಪುರಾಣ
   (3) ಚಾವುಂಡರಾಯಪುರಾಣ
   (4) ಅಜಿತ ತೀರ್ಥಂಕರಪುರಾಣ

9. "ಕಸವರವೆಂಬುದು ನೆರೆ ಸೈರಿಸಲಾರ್ಪೊಡೆ ಪರ ವಿಚಾರಮಂ ಪರ ಧರ್ಮಮುಮಂ" ಎಂಬ ಸಾಲಿನ ಉಲ್ಲೇಖವಿರುವುದು ಈ ಕೆಳಗಿನ ಕೃತಿಯಲ್ಲಿ
   (1) ಆದಿಪುರಾಣ
   (2) ಅಜಿತಪುರಾಣ
   (3) ಕವಿರಾಜಮಾರ್ಗ
   (4) ಹರಿಶ್ಚಂದ್ರ ಕಾವ್ಯ

10. 'ಜಿತಂಭಗವತಾಗತ ಘನ ಗಗನಾಭೇನ ಪದ್ಮನಾಭೇನ' ಎಂದು ಶಾಸನಗಳಲ್ಲಿ ಆರಂಭವಾಗುವ ರಾಜವಂಶ ಯಾವುದು?
(1) ಗಂಗರು (2) ಶಾತವಾಹನರು
(3) ರಾಷ್ಟ್ರಕೂಟರು (4) ಕದಂಬರು

11. 'ಕವಿರಾಜಮಾರ್ಗ' ದ ಆಕರ ಗ್ರಂಥ ಯಾವುದು?
(1) ನಾಟ್ಯಶಾಸ್ತ್ರ (2) ಕಾವ್ಯಪ್ರಕಾಶ
(3) ಕಾವ್ಯಾಲಂಕಾರ (4) ಕಾವ್ಯಾದರ್ಶ

12. ಕನ್ನಡದ ಪ್ರಾಚೀನತೆಯನ್ನು ತಿಳಿಸುವ ಪದಗಳು ಬಳಕೆಯಲ್ಲಿರುವ ಪ್ರಹಸನ ಈ ದೇಶದಲ್ಲಿ ದೊರೆತಿದೆ.
(1) ಈಜಿಪ್ಟ್
(2) ಗ್ರೀಕ್
(3) ಮೆಸಪೆಟೋಮಿಯ
(4) ಅಮೇರಿಕಾ

13. 'ಒನಕೆವಾಡು' ವಿನ ಪ್ರಸ್ತಾಪ ಯಾವ ವೇದದಲ್ಲಿದೆ?
(1) ಋಗ್ವೇದ
(2) ಯಜುರ್‌ವೇದ
(3) ಸಾಮವೇದ
(4) ಅಥರ್ವಣವೇದ

14. 'ಕಿರಾತಾರ್ಜುನೀಯ' ದ ಹದಿನೈದನೆಯ ಸರ್ಗಕ್ಕೆ ಟೀಕುವನ್ನು ಬರೆದವರು
(1) ಗುಣವರ್ಮ
(2) ದುರ್ವಿನೀತ
(3) ಗುಣನಂದಿ
(4) ನಾಗವರ್ಮ

15. ವಿಮಳೋದಯ, ನಾಗಾರ್ಜುನ, ಜಯಬಂಧು, ದುರ್ವಿನೀತ – ಇವರು
(1) ಪದ್ಯಕವಿಗಳು
(2) ಗದ್ಯಕವಿಗಳು
(3) ಮೀಮಾಂಸಕರು
(4) ಲಾಕ್ಷಣಿಕರು

16. ವಿಷ್ಣುಗಣದಲ್ಲಿ ಎಷ್ಟು ವಿನ್ಯಾಸಗಳಿವೆ?
(1) ಎಂಟು
(2) ಏಳು
(3) ಆರು
(4) ಐದು

17. ವಚನಗಳ ಪರ್ಯಾಯಾಂಕಿತಗಳು.
(1) ಆಧ್ಯಾತ್ಮ ಭಾವಗೀತೆಗಳು
(2) ಕನ್ನಡದ ಉಪನಿಷತ್ತುಗಳು
(3) ಅಚ್ಚಗನ್ನಡದ ಬೇಸಾಯಗಳು
(4) ಈ ಮೇಲಿನ ಎಲ್ಲವೂ

18. ಪುರಂದರದಾಸರ ಕೀರ್ತನೆಗಳ ವಿಭಾಗ ಕ್ರಮ ಇದಾಗಿದೆ.
(1) ಅಂತರಂಗ ನಿರೀಕ್ಷಣೆಯ ನಿವೇದನೆ
(2) ಕೃಷ್ಣನ ಬಾಲಲೀಲೆ
(3) ಸಮಾಜ ವಿಮರ್ಶೆ ಮತ್ತು ಬೋಧನೆ
(4) ಈ ಮೇಲಿನ ಎಲ್ಲವೂ

19. 'ಅಭಿನವ ಕೇಶಿರಾಜ' ಎಂದು ಹೆಸರು ಪಡೆದವರು.
(1) ಭಟ್ಟಾಕಳಂಕ
(2) ನಾಗವರ್ಮ
(3) ವಾಮನ
(4) ಈಶ್ವರಕವಿ

20. ಭಾಮಿನೀ ಷಟ್ಪದಿಯಲ್ಲಿ ರಚಿತವಾಗಿರುವ 'ಜೀವದಯಾಷ್ಟಮಿನೋಂಪಿ' ಕಾವ್ಯದ ಕರ್ತೃ
(1) ಚಂದಣವರ್ಣಿ
(2) ವಾದಿರಾಜ
(3) ಜನ್ನ
(4) ಚಂದ್ರಸಾಗರವರ್ಣಿ

21. "ಸೊಗಸಿನ ಸುಗ್ಗಿ ರಸದ ಮಡು" ಎಂದು ಸೂಚಿಸಿ ರಾಘವಾಂಕ ರಚಿಸಿದ ಕಾವ್ಯ
(1) ಹರಿಶ್ಚಂದ್ರ ಕಾವ್ಯ
(2) ಶರಭ ಚಾರಿತ್ರ
(3) ಸಿದ್ಧರಾಮ ಚಾರಿತ್ರ
(4) ಸೋಮನಾಥ ಚಾರಿತ್ರ

22. ಹರಿಹರನ ಪುಷ್ಪರಗಳೆಯು
(1) ಸಂಕೀರ್ಣ ರಗಳೆ
(2) ನೂತನ ರಗಳೆ
(3) ಪುರಾತನರ ರಗಳೆ
(4) ಯಾವ ಗುಂಪಿಗೂ ಸೇರದ ರಗಳೆ

23. 'ಕುಮಾರರಾಮ ಸಾಂಗತ್ಯ' ಕೃತಿಯ ಇನ್ನೊಂದು ಹೆಸರು
(1) ರಾಮಚರಿತಮಾನಸ
(2) ರಾಮನಾಥಚರಿತ
(3) ರಾಮಚಂದ್ರಪುರಾಣ
(4) ಪಂಪರಾಮಾಯಣ

24. 'ಭರತೇಶ ವೈಭವ'ದಲ್ಲಿ ಎಷ್ಟು ಸಾಂಗತ್ಯ ಪದ್ಯಗಳಿವೆ?
(1) 8800 (2) 9907
(3) 1000 (4) 5610

25. 'ಉಗಾಭೋಗ' ಈ ಸಾಹಿತ್ಯದಲ್ಲಿ ಕಂಡುಬರುವ ಪ್ರಕಾರ.
(1) ವಚನ (2) ದಾಸ
(3) ಜನಪದ (4) ಆಧುನಿಕ

26. ದಾಸ ಸಾಹಿತ್ಯಕ್ಕೆ ಪ್ರಮುಖ ಪ್ರೇರಣೆ
(1) ದ್ವೈತ ಸಿದ್ಧಾಂತ
(2) ಅದ್ವೈತ ಸಿದ್ಧಾಂತ
(3) ವಿಶಿಷ್ಟಾದ್ವೈತ ಸಿದ್ಧಾಂತ
(4) ಶಕ್ತಿ ವಿಶಿಷ್ಟಾದ್ವೈತ ಸಿದ್ಧಾಂತ

27. ಅಪೂರ್ಣವಾಗಿ ದೊರೆತ ಹರಿಹರನ ಪ್ರಸಿದ್ಧ ರಗಳೆ ಯಾವುದು?
(1) ನಂಬಿಯಣ್ಣನ ರಗಳೆ
(2) ಬಸವರಾಜದೇವರ ರಗಳೆ
(3) ಮಹಾದೇವಿಯಕ್ಕಗಳ ರಗಳೆ
(4) ಮಲುಹಣನ ರಗಳೆ

28. ವಚನದ ಪ್ರಮುಖ ಲಕ್ಷಣವೆಂದರೆ
(1) ರಾಜಾಶ್ರಯದ ಹಂಗನ್ನು ತಿರಸ್ಕರಿಸಿದ್ದು
(2) ಸಂಸ್ಕೃತ ಪ್ರಭಾವಕ್ಕೆ ಒಳಗಾದದ್ದು
(3) ಪ್ರಭುಗಳ ಹೆಸರಿನಲ್ಲಿ ಸಾಹಿತ್ಯ ನಿರ್ಮಿಸಿದ್ದು
(4) ಪುರಾಣ ಪುಣ್ಯಕಥೆಗಳಿಗೆ ಅಂಟಿಕೊಂಡಿದ್ದು

29. ಕೀರ್ತನ ಸಾಹಿತ್ಯದ ಮೊದಲಿಗರು
(1) ನರಹರಿತೀರ್ಥರು
(2) ಶ್ರೀಪಾದರಾಯರು
(3) ವ್ಯಾಸರಾಯರು
(4) ಪುರಂದರದಾಸರು

**30.** ವ್ಯಷ್ಟಿ ಮತ್ತು ಸಮಷ್ಟಿಯ ಆರ್ಥಿಕ ಪ್ರಗತಿಗೆ ವಚನಕಾರರ ಈ ಹೇಳಿಕೆ ಅತ್ಯಂತ ಹೆಚ್ಚು ಪರಿಣಾಮಕಾರಿ ಪ್ರಭಾವ ಬೀರಬಲ್ಲುದು ________

(1) ದಯವೇ ಧರ್ಮದ ಮೂಲವಯ್ಯ

(2) ಮಾತೆಂಬುದು ಜ್ಯೋತಿರ್ಲಿಂಗ

(3) ಕಾಯಕವೇ ಕೈಲಾಸ

(4) ದೇಹವೇ ದೇಗುಲ

**31.** 'ಜಯ ಹೇ ಕರ್ನಾಟಕ ಮಾತೆ' ಕವನ ಕೊಳಲು ಸಂಕಲನದಲ್ಲಿ ಪ್ರಕಟವಾಗುವ ಮೊದಲು ಯಾವ ಹೆಸರಿನಲ್ಲಿ ರಚಿತವಾಯಿತು?

(1) ಕರ್ಣಾಟಕ ರಾಷ್ಟ್ರಗೀತೆ

(2) ಅಖಂಡ ಕರ್ನಾಟಕ

(3) ನಾಡಗೀತೆ

(4) ಕರ್ನಾಟಕ ಹೆಸರಾಯಿತು

**32.** 'ಅಭಿನವ ವಾಲ್ಮೀಕಿ' ಎಂದು ಯಾರನ್ನು ಕರೆಯುವರು?

(1) ಮುದ್ದಣ

(2) ಕಾಳಿದಾಸ

(3) ಭಾಸ

(4) ಭವಭೂತಿ

**33.** ಕನ್ನಡದ ಮೊದಲ ಪ್ರವಾಸ ಕಥನ ಯಾವುದು?

(1) ಪಂಪಾಯಾತ್ರೆ

(2) ಅಮೇರಿಕಾದಲ್ಲಿ ನಾನು ಮತ್ತು ಶಾಂತಿ

(3) ಅಪೂರ್ವ ಪಶ್ಚಿಮ

(4) ಆಯನ

**34.** ಕನ್ನಡದ ಪ್ರಥಮ ಬೃಹತ್ ಕಾದಂಬರಿ

(1) ಇಂದಿರಾಬಾಯಿ

(2) ದುರ್ಗೇಶ ನಂದಿನಿ

(3) ಕಲಾವತಿ ಪರಿಣಯ

(4) ಸೌಗಂಧಿಕಾ ಪರಿಣಯ

**35.** ಆಧುನಿಕ ಕನ್ನಡ ಸಾಹಿತ್ಯದಲ್ಲಿ ಇವರನ್ನು ಸಮನ್ವಯದ ಕವಿ ಎಂದು ಗುರುತಿಸಲಾಗುತ್ತಿದೆ.

(1) ಪಿ. ಲಂಕೇಶ

(2) ಡಾ. ಚೆನ್ನಣ್ಣ ವಾಲೀಕಾರ

(3) ಚೆನ್ನವೀರ ಕಣವಿ

(4) ಪು.ತಿ.ನ.

**36.** ಸ್ವಾತಂತ್ರ್ಯಾ ನಂತರದ ಭ್ರಮೆನಿರಸನ ಸ್ಥಿತಿಯನ್ನು 'ನಲವತ್ತೇಳರ ಸ್ವಾತಂತ್ರ್ಯ' ದ ಕವಿತೆಯಲ್ಲಿ ಅನಾವರಣಗೊಳಿಸಿದ ಕವಿ.

(1) ಬರಗೂರು ರಾಮಚಂದ್ರಪ್ಪ

(2) ಡಾ. ಸಿದ್ಧಲಿಂಗಯ್ಯ

(3) ಮ.ನ.ಜವರಯ್ಯ

(4) ದೇವನೂರು ಮಹಾದೇವ

**37.** ಕನ್ನಡದಲ್ಲಿ ಬಂದ ಮೊದಲ ಆತ್ಮಕಥನ ಕೃತಿ ಇದಾಗಿದೆ.

(1) ಹತ್ತು ವರುಷ

(2) ನನ್ನ ಜೀವನ ಸ್ಮೃತಿಗಳು

(3) ನನ್ನ ಕಳೆದ ಮೂವತ್ತು ವರುಷಗಳು

(4) ಹುಚ್ಚು ಮನಸ್ಸಿನ ಹತ್ತು ಮುಖಗಳು

38. "ಸಂಪ್ರತಿ" ಎಂಬ ಕೃತಿ ಸಾಹಿತ್ಯದ ಈ ಪ್ರಕಾರದ್ದಾಗಿದೆ.

(1) ಅಂಕಣ ಬರಹ ಸಂಕಲನ

(2) ಕಥಾ ಬರಹ ಸಂಕಲನ

(3) ಪ್ರಬಂಧ ಬರಹ ಸಂಕಲನ

(4) ವಿನೋದ ಬರಹ ಸಂಕಲನ

39. ಸಪೋಕ್ಲಿಸ್‌ನ 'ಅಜಾಕ್ಸ್' ನಾಟಕದ ಮಾದರಿಯಲ್ಲಿ ಕನ್ನಡದಲ್ಲಿ ರಚಿತವಾದ ನಾಟಕ.

(1) ಶೂದ್ರ ತಪಸ್ವಿ

(2) ಬೆರಳ್ಗೆ ಕೊರಳ್

(3) ಅಶ್ವತ್ಥಾಮನ್

(4) ಸ್ಮಶಾನ ಕುರುಕ್ಷೇತ್ರ

40. ಗುಲಾಮಗಿರಿಯ ವಿರುದ್ಧ, ಜಾತಿ, ಮತ, ಧರ್ಮವನ್ನು ಲೆಕ್ಕಿಸದೇ ಒಂದಾಗಿ ಸಿಡಿದು ನಿಂತ ಗ್ರಾಮ ಚಿತ್ರಣ ತ.ರಾ.ಸು. ಅವರ ಈ ಕಾದಂಬರಿಯ ಜೀವಾಳ.

(1) ಜೀತದ ಜೀವ

(2) ಮಸಣದ ಹೂ

(3) ಪುರುಷಾವತಾರ

(4) ರಕ್ತ ತರ್ಪಣ

41. ಜನಪದವನ್ನು ಸತ್ವಯುತ ಶಿಷ್ಟ ಸಾಹಿತ್ಯವನ್ನಾಗಿಸಿ ಮಹಾಕಾವ್ಯದ ಸ್ವರೂಪವನ್ನು ಗಳಿಸಿಕೊಟ್ಟವರು.

(1) ಹಾ.ಮಾ. ನಾಯಕ

(2) ಸೋಮಶೇಖರ ಇಮ್ರಾಪೂರ

(3) ಚಂದ್ರಶೇಖರ ಕಂಬಾರ

(4) ಬೆಟಗೇರಿ ಕೃಷ್ಣಶರ್ಮ

42. ಶ್ರೀಕೃಷ್ಣ ಆಲನಹಳ್ಳಿ ಅವರು 'ಕಾಡು' ಕಾದಂಬರಿಯನ್ನು ಯಾರು Forest ಎನ್ನುವ ಹೆಸರಿನಿಂದ ಇಂಗ್ಲೀಷಿಗೆ ಅನುವಾದಿಸಿದವರು?

(1) ಕೆ.ವಿ. ತಿರುಮಲೇಶ

(2) ಎಚ್.ಎಸ್. ಶಿವಪ್ರಕಾಶ

(3) ಶಾಂತಿನಾಥ ದೇಸಾಯಿ

(4) ಎ.ಕೆ.ರಾಮಾನುಜನ್

43. ಟಿ.ಪಿ.ಕೈಲಾಸಂ ರ ಮೊದಲ ನಾಟಕ

(1) ಪೋಲಿಕಿಟ್ಟಿ

(2) ಬಂಡ್ವಾಳಿಲ್ಲದ ಬಡಾಯಿ

(3) ಟೊಳ್ಳುಗಟ್ಟಿ

(4) ಅಮ್ಮಾವ್ರಗಂಡ

44. 'ಏನಾದರಾಗು ಮೊದಲು ಮಾನವನಾಗು' ಎಂದ ಕವಿ

(1) ಸಿದ್ಧಯ್ಯ ಪುರಾಣಿಕ

(2) ಸು.ರಂ.ಎಕ್ಕುಂಡಿ

(3) ಬೆಟಗೇರಿ ಕೃಷ್ಣ ಶರ್ಮ

(4) ಬಿ.ಸಿ. ರಾಮಚಂದ್ರ ಶರ್ಮ

45. 'ತಿರುಳ್ಗನ್ನಡ ತಿರುಕ' ಎಂಬ ಕಾವ್ಯನಾಮದಿಂದ ಪ್ರಸಿದ್ಧರಾದವರು

(1) ಟಿ.ಎಸ್.ವೆಂಕಣ್ಣಯ್ಯ

(2) ಉತ್ತಂಗಿ ಚೆನ್ನಬಸಪ್ಪ

(3) ಮುಳಿಯ ತಿಮ್ಮಪ್ಪಯ್ಯ

(4) ಡೆಪ್ಯುಟಿ ಚೆನ್ನಬಸಪ್ಪ

46. ಇಂಗ್ಲೀಷ್‌ನ 'ದ ಓಡ್' ನ ಕನ್ನಡದ ಸಮಾನಾರ್ಥ.

(1) ಸರಳ ರಗಳೆ (2) ಮಹಾಕಾವ್ಯ

(3) ಪ್ರಗಾಥ (4) ಅಣಕವಾಡು

**47.** 'ನವರಾತ್ರಿ' ಇದು ಯಾವ ಪ್ರಕಾರದ ಸಾಹಿತ್ಯ ಕೃತಿ?

(1) ಮಹಾಕಾವ್ಯ (2) ಖಂಡಕಾವ್ಯ

(3) ಕಥನ ಕವನ (4) ಪ್ರಗಾಥ

**48.** ಈ ಕೆಳಗಿನ 'ಅ' ವಿಭಾಗದಲ್ಲಿರುವ ವಿವರಗಳಿಗೆ 'ಆ' ವಿಭಾಗದಲ್ಲಿರುವ ಸಮರ್ಪಕವಾದ ಸಂಬಂಧಗಳನ್ನು / ಕೃತಿಗಳನ್ನು ಸರಿ ಹೊಂದಿಸಿ ಮತ್ತು ಪ್ರಶ್ನೆಯ ಕೋಷ್ಟಕದ ಕೆಳಗೆ ಕೊಟ್ಟಿರುವ 4 ಗುಂಪುಗಳಲ್ಲಿ ಸರಿಯಾದ ಉತ್ತರದ ಒಂದು ಗುಂಪನ್ನು ಗುರುತಿಸಿರಿ.

| | ಅ | | ಆ |
|---|---|---|---|
| A | "ತನ್ನ ಕಾಲಮಾನದ ಹೋರಾಟದೊಂದಿಗೆ ನಡೆದ ದೌರ್ಜನ್ಯಗಳನ್ನೇ ವಸ್ತುವಾಗಿ ಸ್ವೀಕರಿಸುತ್ತಾ ಬೆಳೆದು ಬಂದ ಸಾಹಿತ್ಯ" | 1. | ಪ್ರಗತಿಶೀಲ ಸಾಹಿತ್ಯ |
| B | ಇಲಿಯಟ್ ಪ್ರತಿಪಾದಿಸಿದ "ಮೊಡರ್ನ್ ಪೊಯಟ್ರಿ" ಯಿಂದ ಪ್ರೇರಿತವಾಗಿ ಮೂಡಿ ಬಂದ ಕನ್ನಡ ಕಾವ್ಯ. | 2 | ನವೋದಯ ಸಾಹಿತ್ಯ |
| C | ಊಳಿಗಮಾನ್ಯದಿಂದ ಬಂಡವಾಳಶಾಹಿಯೆಡೆಗೆ, ವಸಾಹತುಶಾಹಿಯಿಂದ ಪ್ರಜಾತಾಂತ್ರಿಕ ಸ್ವಾತಂತ್ರ್ಯದ ಕಡೆಗೆ ಹೊರಳಿದ ಸಾಹಿತ್ಯ. | 3. | ದಲಿತ ಸಾಹಿತ್ಯ |
| D | ಬ್ರಿಟಿಷ್ ವಸಾಹತುಶಾಹಿಯ ಆಗಮದಿಂದ ಆವಿರ್ಭಾವಿಸಿದ ಕನ್ನಡ ಸಾಹಿತ್ಯ ಪಂಥ | 4. | ನವ್ಯ ಸಾಹಿತ್ಯ |

<u>ಗುಂಪುಗಳು:</u>

| | A | B | C | D |
|---|---|---|---|---|
| (1) | 4 | 3 | 1 | 2 |
| (2) | 3 | 4 | 1 | 2 |
| (3) | 1 | 2 | 3 | 4 |
| (4) | 1 | 4 | 3 | 2 |

**49.** ಶ್ರೀ ಎಸ್.ಎಲ್. ಭೈರಪ್ಪನವರ ಯಾವ ಕೃತಿಗೆ 'ಸರಸ್ವತಿ ಸಮ್ಮಾನ ಪ್ರಶಸ್ತಿ' ದೊರಕಿದೆ?

(1) ಪರ್ವ

(2) ಮಂದ್ರ

(3) ವಂಶವೃಕ್ಷ

(4) ಗೃಹಭಂಗ

**50.** ಅಸಂಗತ ನಾಟಕದ ಸ್ವರೂಪವನ್ನು ಹೊಂದಿದ ನಾಟಕ________

(1) ಸಿರಿಸಂಪಿಗೆ

(2) ಸಂಕ್ರಾಂತಿ

(3) ಶೂದ್ರತಪಸ್ವಿ

(4) ಸಾಯೋಆಟ

**51.** ಸ್ವಭಾವೋಕ್ತಿಯನ್ನೂ ಅಲಂಕಾರಗಳಲ್ಲಿ ಒಂದು ಎಂದು ಪರಿಗಣಿಸಿದವರು.

(1) ಭಾಮಹ

(2) ದಂಡಿ

(3) ರುದ್ರಟ

(4) ರಾಜಶೇಖರ

**52.** ವ್ಯುತ್ಪತ್ತಿ ಎಂದರೆ

(1) ಅನೇಕ ವಿಷಯಗಳನ್ನು ತಿಳಿದಿರುವುದು

(2) ಉಚಿತಾನುಚಿತ ವಿವೇಕ

(3) ಪೌರ್ವಾಪರ್ಯ ಪರಾಮರ್ಶನ ಕೌಶಲ

(4) ಮೇಲಿನ ಎಲ್ಲವೂ

**53.** ರಸವೇ ಕಾವ್ಯದ ಅಂತಿಮ ಗಮ್ಯ, ಧ್ವನಿಯು ರಸಕ್ಕೆ ಪೋಷಕ – ರಸಾನುಭವಕ್ಕೆ ಕಾರಣವಾಗುವ ಧ್ವನಿ ಎಂದರೆ ಅದು

(1) ಸಂಲಕ್ಷ್ಯ ಕ್ರಮ ಧ್ವನಿ

(2) ಅಸಂಲಕ್ಷ್ಯ ಕ್ರಮ ಧ್ವನಿ

(3) ಅನುರಣನ ಧ್ವನಿ

(4) ವಾಚ್ಯ ಧ್ವನಿ

**54.** ಲಾಂಜಿನಸ್ ಪ್ರತಿಪಾದಿಸಿದ ಭವ್ಯತೆಯನ್ನು ಹೋಲುವ ಭಾರತೀಯ ಕಾವ್ಯಮೀಮಾಂಸೆಯಲ್ಲಿ ಕಾಣುವ ಕಾವ್ಯಮಾರ್ಗ.

(1) ವೈದರ್ಭಿ (2) ಗೌಡಿ

(3) ಪಾಂಚಾಲಿ (4) ಲಾಟೀಯ

**55.** ಕಾವ್ಯ ಎಂದರೆ 'ಸಾವಯವ ಸಮಗ್ರೀಕರಣದ ಶಿಲ್ಪ' ಎಂಬ ಅಭಿಪ್ರಾಯ ರೂಪಿಸಿದವರು.

(1) ವಿ.ಕೃ. ಗೋಕಾಕ

(2) ಶಾಂತಿನಾಥ ದೇಸಾಯಿ

(3) ರಾಮಚಂದ್ರಶರ್ಮ

(4) ಗೋಪಾಲಕೃಷ್ಣ ಅಡಿಗ

**56.** ದಾರ್ಶನಿಕ ಹೆಗೆಲ್‌ನ ಪ್ರಕಾರ 'ಮಾನವ ಅಪರಿಪೂರ್ಣತೆ' ಮತ್ತು 'ಅಸಾಧ್ಯ ಆದರ್ಶಗಳು' ಇವುಗಳಿಂದುಂಟಾಗುವ ಬಿರುಕಿನಲ್ಲಿ ______ ಸಾಹಿತ್ಯ ಪ್ರಕಾರದ ಮೂಲವಿದೆ.

(1) ರುದ್ರನಾಟಕ

(2) ವೈನೋದಿಕ

(3) ಮಹಾಕಾವ್ಯ

(4) ಭಾವಗೀತೆ

**57.** ಅಪಾರವಾದ ಕಾವ್ಯ ಸಂಸಾರದಲ್ಲಿ ಕವಿಯೇ ಬ್ರಹ್ಮ. ಅವನ ಇಷ್ಟದಂತೆ ಇಡೀ ವಿಶ್ವವೇ ಪರಿವರ್ತನೆಯನ್ನು ಪಡೆಯುತ್ತದೆ ಎಂದು ಹೇಳಿದ ಲಾಕ್ಷಣಿಕ.

(1) ಅಭಿನವಗುಪ್ತ

(2) ಮಮ್ಮಟ

(3) ಕುಂತಕ

(4) ಆನಂದವರ್ಧನ

**58.** ಕೀರ್ತಿಯ ಬಣ್ಣ ಬಿಳುಪು, ಚಂದ್ರಕಾಂತ ಶಿಲೆ ಬೆಳದಿಂಗಳಿಗೆ ಕರಗುತ್ತವೆ – ಇವೇ ಮುಂತಾದ ಕಾವ್ಯದಲ್ಲಿನ ಹೇಳಿಕೆಗಳು.

(1) ಕವಿಯ ಕಲ್ಪನಾ ವಿಲಾಸ

(2) ಅಸಂಗತ ಕಲ್ಪನೆ

(3) ಕವಿ ಸಮಯ

(4) ಕಾವ್ಯದೋಷ

**59.** ಕಷ್ಟತೆ, ಪುನರುಕ್ತಿ, ಸಂಧಿಗ್ಧತೆ, ಗ್ರಾಮ್ಯತೆ – ಕಾವ್ಯದಲ್ಲಿ ಇವು

(1) ಶಬ್ದ ದೋಷಗಳು

(2) ಅರ್ಥ ದೋಷಗಳು

(3) ರಸ ದೋಷಗಳು

(4) ರೀತಿ ದೋಷಗಳು

**60.** "ಧ್ವನಿ ಸೋತು ಗೆಲ್ಲುತ್ತದೆ" ಎಂದು ಹೇಳಿದವರು.

(1) ತೀ.ನಂ.ಶ್ರೀ.

(2) ಜಿ.ಎಸ್.ಎಸ್.

(3) ಕೆ. ಕೃಷ್ಣಮೂರ್ತಿ

(4) ಎಂ. ಹಿರಿಯಣ್ಣ

61. ಪಾಶ್ಚಾತ್ಯ ಸೌಂದರ್ಯಮೀಮಾಂಸೆಯ 'Psychical Distance' ತತ್ತ್ವವನ್ನು ಹೋಲುವ ಭಾರತೀಯ ತತ್ತ್ವ.

(1) ಸಂಭಾವನಾ

(2) ಸಾಧಾರಣೀಕರಣ

(3) ಸಹೃದಯ ದೂರ

(4) ರಸಾರ್ಣತೆ

62. ರುದ್ರನಾಟಕದಲ್ಲಿ ಶೋಧನೆಗೊಳಗಾಗುವ ಭಾವಗಳು.

(1) ಕರುಣ ಮತ್ತು ವೀರ

(2) ಶಾಂತ ಮತ್ತು ಕರುಣ

(3) ಕರುಣ ಮತ್ತು ಭಯ

(4) ಭಯ ಮತ್ತು ವೀರ

63. ಮಾರ್ಕ್ಸ್‌ವಾದಿ ವಿಮರ್ಶೆಯಲ್ಲಿ ಹೆಸರಾದ ಕನ್ನಡದ ಲೇಖಕರು.

(1) ಡಿ.ಆರ್. ನಾಗರಾಜ್

(2) ಕೆ.ಆರ್. ನಾಗರಾಜ್

(3) ಬಿ.ಎಸ್. ಕೇಶವರಾಜ್

(4) ಆನಂದರಾಜ್

64. 'ಪ್ರಾಯೋಗಿಕ ವಿಮರ್ಶೆ' ಎಂಬ ಪರಿಕಲ್ಪನೆಯನ್ನು ಮೊದಲಿಗೆ ಗುರುತಿಸಿದ ಪಾಶ್ಚಾತ್ಯ ವಿಮರ್ಶಕ.

(1) ವರ್ಡ್ಸ್‌ವರ್ತ್

(2) ಶೆಲ್ಲಿ

(3) ಬ್ರೌನಿಂಗ್

(4) ಐ.ಎ. ರಿಚರ್ಡ್ಸ್

65. ಕನ್ನಡದಲ್ಲಿ ದರ್ಶನ ವಿಮರ್ಶೆಯನ್ನು ಮೊದಲು ಬರೆದವರು.

(1) ಬೇಂದ್ರೆ

(2) ಪು.ತಿ.ನ

(3) ಕುವೆಂಪು

(4) ಕುರ್ತಕೋಟಿ

66. 'ಬಂದೆಯಾ ಬಾ ವಿಶ್ವಾವಸು, ನೆನೆವ ಹೊತ್ತಿಗೆ ಬಂದ ನಿನಗೆ ಸಾವಿರದ ಆಯಸ್ಸು' ಇಲ್ಲಿರುವ ಅಲಂಕಾರ:–

(1) ಉಪಮೆ

(2) ರೂಪಕ

(3) ಶ್ಲೇಷೆ

(4) ದೃಷ್ಟಾಂತ

67. "ನಿನಗೂರುಭಂಗ ಭಯಮಾಗದೆ ಪೋಕುಮೆ" ಎಂದು ಕೌರವೇಶ್ವರನಿಗೆ ನುಡಿದವರು ಯಾರು?

(1) ಸಂಜಯ

(2) ಮರುಳು

(3) ಸೈನಿಕ

(4) ಧೃತರಾಷ್ಟ್ರ

68. ಅತಿ ಹೆಚ್ಚು ಮಾತ್ರೆಗಳನ್ನೊಳಗೊಂಡಿರುವ ಷಟ್ಪದಿ.

(1) ಭಾಮಿನಿ ಷಟ್ಪದಿ

(2) ಭೋಗ ಷಟ್ಪದಿ

(3) ಕುಸುಮ ಷಟ್ಪದಿ

(4) ವಾರ್ಧಕ ಷಟ್ಪದಿ

69. ಕನ್ನಡದ ಮೊದಲ ಸ್ವತಂತ್ರ ಐತಿಹಾಸಿಕ ನಾಟಕ ಯಾವುದು?

(1) ಮಿತ್ರವಿಂದ ಗೋವಿಂದ

(2) ಬೆಟ್ಟದ ಅರಸು

(3) ವಿಗಡ ವಿಕ್ರಮರಾಯ

(4) ಸುಗುಣ ಗಂಭೀರ

70. 'ಸ್ತ್ರೀವಾದ ಮತ್ತು ಸ್ತ್ರೀವಾದಿ' ವಿಮರ್ಶೆಯ ಲೇಖಕಿ ಯಾರು?

(1) ಬೆಳಗೆರೆ ಜಾನಕಮ್ಮ

(2) ಕೊಡಗಿನ ಗೌರಮ್ಮ

(3) ತಿರುಮಲೆ ತಾತಮ್ಮ

(4) ವಿಜಯಾದಬ್ಬೆ

71. ಇದು ಪ್ರತಿಭಾ ನಂದಕುಮಾರ್‌ರವರ ಕವನವಾಗಿದೆ.

(1) ನಾವು ಹುಡುಗಿಯರೇ ಹೀಗೆ

(2) ಗೆಳತಿಯ ಗುಟ್ಟು

(3) ಉಲೂಪಿ

(4) ಇವಳು

72. 'ತಬ್ಬಲಿಗಳು' ಈ ಕಥೆಯ ಲೇಖಕರು ಯಾರು?

(1) ಜಿ.ಟಿ. ರಾಘವ

(2) ಅಶ್ವತ್ಥ

(3) ವೀಣಾ

(4) ರಾಘವೇಂದ್ರ ಖಾಸನೀಸ್

73. 'ಶಾಂತಲದೇವಿಯು ಕರ್ನಾಟಕ ಸಂಸ್ಕೃತಿಯು ಹೊಮ್ಮಿಸಿರುವ ಹೂವು' ಎಂದವರು.

(1) ತೀ.ನಂ.ಶ್ರೀ

(2) ಬಿ.ಎಂ.ಶ್ರೀ

(3) ಡಾ.ಎಚ್. ತಿಪ್ಪೇರುದ್ರಸ್ವಾಮಿ

(4) ಸಿ.ಬಿ. ಸೀತಾರಾಮ

74. ಹಾಲ ರಾಜನ ಗಾಥಾ ಸಪ್ತಶಥಿಯಲ್ಲಿ ಸಿಕ್ಕಿವೆ ಎಂದು ಹೇಳುವ ಕನ್ನಡದ ಪದಗಳು.

(1) ತುಪ್ಪ, ಪೊಟ್ಟೆ

(2) ಇಸಿಲ

(3) ಕರ್ಣಾಟಕ

(4) ಮಲ್ಪೆ

75. ರಸಾನುಭವದಲ್ಲಿ ರಸನಿಷ್ಪತ್ತಿಗೆ ಅಡ್ಡಿಯುಂಟು ಮಾಡುವ ಅಡೆತಡೆಗಳು ಎಷ್ಟು?

(1) ಐದು

(2) ಆರು

(3) ಏಳು

(4) ಎಂಟು

76. ಲೋಕ ರೂಢಿಯ ಮಾತಿನ ಕ್ರಮವನ್ನು ಮೀರಿದ ಭಾಷಾಭಿವ್ಯಕ್ತಿಯ ಕ್ರಮವನ್ನು "ವಕ್ರಕವಿ ವ್ಯಾಪಾರ" ಎಂದು ಕರೆದ ಮೀಮಾಂಸಕ

(1) ದಂಡಿ

(2) ಭಾಮಹ

(3) ಅಭಿನವಗುಪ್ತ

(4) ಕುಂತಕ

77. "ಮುಂಡಿಗೆ" ಎನ್ನುವ ಕಾವ್ಯ ಪ್ರಕಾರ ಬಳಸಿದ ಕವಿ.
(1) ಕನಕದಾಸ
(2) ಜಗನ್ನಾಥದಾಸ
(3) ಪುರಂದರ ದಾಸ
(4) ಕುಮಾರವ್ಯಾಸ

78. ಮಧ್ಯಕಾಲೀನ ಕನ್ನಡ ಸಾಹಿತ್ಯದ ಸಂದರ್ಭದಲ್ಲಿ ಚಾರಿತ್ರಿಕ ವ್ಯಕ್ತಿಗಳನ್ನು ಪೌರಾಣಿಕ ವ್ಯಕ್ತಿಗಳನ್ನಾಗಿ ಮಾಡಿದ ಕವಿ.
(1) ಕುಮಾರವ್ಯಾಸ
(2) ಹರಿಹರ
(3) ರಾಘವಾಂಕ
(4) ಲಕ್ಷ್ಮೀಶ

79. ಇವರು ಕನ್ನಡದ ಹೆಸರಾಂತ ಸ್ತ್ರೀವಾದಿ ಲೇಖಕಿ.
(1) ಪ್ರೇಮಾ ಭಟ್
(2) ತಿರುಮಲಾಂಬ
(3) ತ್ರಿವೇಣಿ
(4) ವಿಜಯಾ ದಬ್ಬೆ

80. ಹೆಳವನ ಹೆಗಲ ಮೇಲೆ ಕುರುಡ ಕೂತಿದ್ದಾನೆ, ದಾರಿಸಾಗುವುದೆಂತೋ ನೋಡಬೇಕು ಎನ್ನುವ ಕವಿತೆಯ ಸಾಲುಗಳು ________ ಕವಿಯ ಕವಿತೆಯಿಂದ ಆಯ್ದುಕೊಳ್ಳಲಾಗಿದೆ.
(1) ಅಡಿಗರ ಕೂಪಮಂಡೂಕ
(2) ಅಡಿಗರ ಭೂಮಿಗೀತ
(3) ಅಡಿಗರ ಶ್ರೀರಾಮ ನವಮಿಯ ದಿವಸ
(4) ಅಡಿಗರ ವರ್ಧಮಾನ ಕವಿತೆ

81. ನವ್ಯ ಕಾಲಘಟ್ಟದಲ್ಲಿ ರಚನೆಯಾದ ಶ್ರಾದ್ಧ ಕತೆಯ ಕತೆಗಾರ.
(1) ಯು.ಆರ್. ಅನಂತಮೂರ್ತಿ
(2) ಬಿ.ಸಿ.ರಾಮಚಂದ್ರ ಶರ್ಮ
(3) ಟಿ.ಜಿ. ರಾಘವ
(4) ಶಾಂತಿನಾಥ ದೇಸಾಯಿ

82. ಅತ್ಯಂತ ಪ್ರಾಚೀನ ಶಾಸನೋಕ್ತ ಕನ್ನಡ ಶಬ್ದ.
(1) ಪಲ್ಮಿಡಿ
(2) ವೆಳ್ಗೊಳ
(3) ಇಸಿಲ
(4) ಕಿಸುವೊಳಲ್

83. ವಚನ ಸಾಹಿತ್ಯಕ್ಕೆ ಮೂಲ ತಮಿಳಿನ 'ತೇವಾರಂ' ಎಂದು ಮೊದಲು ಗುರುತಿಸಿದವರು.
(1) ಡಿ.ಎಲ್. ನರಸಿಂಹಾಚಾರ್
(2) ಆರ್. ನರಸಿಂಹಾಚಾರ್
(3) ಎ.ವೆಂಕಟಸುಬ್ಬಯ್ಯ
(4) ಜಿ.ವೆಂಕಟಸುಬ್ಬಯ್ಯ

84. ಆಧುನಿಕ ಕನ್ನಡ ಕಾದಂಬರಿ ಪ್ರಕಾರವನ್ನು ಪ್ರಭಾವಿಸಿದ ಮಹತ್ವದ ಲೇಖಕ.
(1) ಸುಬ್ರಹ್ಮಣ್ಯ ಭಾರತಿ
(2) ಪ್ರೇಮ್ ಚಂದ್
(3) ಬಂಕಿಮಚಂದ್ರ
(4) ತಗಳಿ ಶಿವಶಂಕರ ಪಿಳ್ಳೈ

**85.** ನಿನ್ನೀ ಬೆಸಸಿದ ಚಕ್ರಮದೆನ್ನೀ ದೇಹಾದ್ರಿಯಂ ಗೆಲಲ್ ನೆ(ರೆ)ಯದು ನೀಂ/
ಭಿನ್ನನಿದೇಕಿರ್ಪೆಯದೆಂ
ತೆನ್ನ ಗೆಲಲ್ ವಜ್ರಗಿರಿಯನಾರ್ಕುಮೆ ವಜ್ರಂ॥ ಎಂದು ಯಾರು ಯಾರಿಗೆ ಹೇಳಿದರು?

(1) ಭರತ ಬಾಹುಬಲಿಗೆ

(2) ಬಾಹುಬಲಿ ಭರತನಿಗೆ

(3) ಪುರೋಹಿತ ಭರತನಿಗೆ

(4) ಪುರೋಹಿತ ಬಾಹುಬಲಿಗೆ

**86.** 'ಸ್ತ್ರೀಯರ ಹಕ್ಕುಗಳ ಸಮರ್ಥನೆ' ಕೃತಿ ಬರೆದವರು.

(1) ಮೇರಿ ವರ್ಟ್‌ಲಿ ಮಾಂಟೆಗೊ

(2) ವರ್ಜೀನಿಯಾ ವುಲ್ಫ್

(3) ಮೇರಿವುಟ್ ಸ್ಟನ್‌ಕ್ರಾಫ್ಟ್

(4) ಸಿಮೋನ್ ದ ಬೋವಾ

**87.** ಇದು ಚಂಪೂಕಾವ್ಯವಲ್ಲ.

(1) ಆದಿಪುರಾಣ

(2) ಶಾಂತಿಪುರಾಣ

(3) ಅಜಿತ ತೀರ್ಥಕರ ಪುರಾಣತಿಲಕ

(4) ಮದನತಿಲಕ

**88.** ಮಾಗಧಿ ರೀತಿಯನ್ನು ಹೇಳಿದವ.

(1) ದಂಡಿ

(2) ವಾಮನ

(3) ರುದ್ರಟ

(4) ಭೋಜ

**89.** ಪ್ರೇಯಾನ್ ರಸವನ್ನು ಹೇಳಿದವನು

(1) ಭರತ

(2) ರುದ್ರಟ

(3) ಉದ್ಭಟ

(4) ಲೊಲ್ಲಟ

**90.** ಕಥಾರ್ಸಿಸ್ ಎಂದರೆ

(1) ಕಥಾನಾಯಕ

(2) ಭಯ ಮತ್ತು ಕರುಣೆ

(3) ಅತಿಭಾವುಕತೆ

(4) ಭಾವವಿರೇಚನ

**91.** ಎಸ್.ಟಿ. ಕೋಲ್ರಿಜ್ ವಿಶೇಷವಾಗಿ ಚರ್ಚಿಸಿದ ಪರಿಕಲ್ಪನೆ.

(1) ಇಮ್ಯಾಜಿನೇಶನ್

(2) ಇಮ್ಯಾಜ್

(3) ಸಬ್ಲೈಮ್

(4) ಇಂಟ್ಯೂಶನ್

**92.** ಪಡುವಣದ ರಮ್ಯವಾದಿಗಳು ಮತ್ತು ಕನ್ನಡ ನವೋದಯ ಕವಿಗಳ ಒಂದು ಮುಖ್ಯ ವ್ಯತ್ಯಾಸ.

(1) ನಿಸರ್ಗಪ್ರೀತಿ

(2) ದೇವರ ಮೇಲಿನ ನಂಬಿಕೆ

(3) ಅಧ್ಯಾತ್ಮ

(4) ಭಾವಪ್ರಾಧಾನ್ಯ

**93.** ಇರುವಿಕೆಯ ತಲ್ಲಣದ (angst) ಚಿತ್ರಣ ದೊರೆಯುವುದು.

(1) ರಮ್ಯವಾದಿ ಸಾಹಿತ್ಯದಲ್ಲಿ

(2) ಮಾರ್ಕ್ಸ್‌ವಾದಿ ಸಾಹಿತ್ಯದಲ್ಲಿ

(3) ಆಧುನಿಕತಾವಾದಿ ಸಾಹಿತ್ಯದಲ್ಲಿ

(4) ರಚನವಾದಿ ಸಾಹಿತ್ಯದಲ್ಲಿ

94. 'ರಸೋ ವೈ ಸ:' ಎಂಬ ಉಕ್ತಿಯ ಮೂಲ
(1) ತೈತ್ತಿರೀಯೋಪನಿಷತ್
(2) ಛಾಂದೋಗ್ಯೋಪನಿಷತ್
(3) ಭಾರತೀಯ ನಾಟ್ಯಶಾಸ್ತ್ರ
(4) ರಸಗಂಗಾಧರ

95. 'ವಿಮರ್ಶೆ ಎಂದರೆ ಅನುಭವಗಳ ನಡುವಿನ ತಾರತಮ್ಯವನ್ನು ವಿವೇಚಿಸಲು ಮತ್ತು ಅವುಗಳನ್ನು ಬೆಲೆ ಕಟ್ಟಲು ಮಾಡುವ ಪ್ರಯತ್ನ' – ಈ ನಿರ್ವಚನ ನೀಡಿದವರು
(1) ಟಿ.ಎಸ್. ಎಲಿಯಟ್
(2) ಐ.ಎ. ರಿಚರ್ಡ್ಸ್
(3) ಎಫ್.ಆರ್. ಲೀವಿಸ್
(4) ವಿಲ್ಯಂ ಎಂಪ್ಸನ್

96. ಹುತ್ತ ಹಾವಿಗೆ ಚಂದ\ ಮುತ್ತು ಕೊರಳಿಗೆ ಚಂದ
ನಕ್ಷತ್ರ ಚಂದ ಗಗನಕೆ – ಶಿವಯೋಗಿಗೆ
(1) ಭಿಕ್ಷವೇ ಚಂದ
(2) ಭಕ್ತಿಯೇ ಚಂದ
(3) ವಿಭೂತಿಯೇ ಚಂದ
(4) ಜ್ಞಾನವೇ ಚಂದ

97. 'ನೀಚರಾ ನೆರೆಯಿಂದ ಈಚಲದ ಮರಲೇಸು' ಈ ಉಕ್ತಿ ಯಾವ ಕವಿಗೆ ಸೇರಿದ್ದು?
(1) ಸರ್ವಜ್ಞ
(2) ಕನಕದಾಸ
(3) ಶಿಶುನಾಳ ಶರೀಫ
(4) ಅಲ್ಲಮಪ್ರಭು

98. ಮನೋವೈಜ್ಞಾನಿಕ ವಿಮರ್ಶೆಗೆ ಸಂಬಂಧಿಸಿದ ಫ್ರಾಯ್ಡ್‌ನ ಕೃತಿಯ ಹೆಸರೇನು?
(1) ದ ಸನ್ ಆಫ್ ವುಮನ್
(2) ಇಂಪಾಂಡರೆಬಲ್ ಫ್ಯಾಕ್ಟರ್
(3) ಇಲಿಯಡ್
(4) ಲೆನಾರ್ಡೊ ಡ ವಿಂಚಿ

99. ಕನ್ನಡದಲ್ಲಿ ಉಪಲಬ್ಧವಾದ ಅತ್ಯಂತ ಪ್ರಾಚೀನವಾದ ಛಂದಸ್ಸಿನ ಕೃತಿ ಇದು.
(1) ಗುಣಚಂದ್ರನ ಛಂದಸ್ಸಾರ
(2) 1ನೆಯ ನಾಗವರ್ಮನ ಛಂದೋಂಬುದಿ
(3) ವೀರಭದ್ರನ ನಂದೀಛಂದಸ್ಸು
(4) ಜಯಕೀರ್ತಿಯ ಛಂದೋನುಶಾಸನಮ್

100. ಬಂಡಾಯದ ಮೂಲಶಬ್ದ 'ಬಂಡು' ಈ ಭಾಷಾ ಮೂಲದ್ದು.
(1) ಕನ್ನಡ
(2) ಸಂಸ್ಕೃತ
(3) ಮರಾಠಿ
(4) ಹಿಂದಿ

**SPACE FOR ROUGH WORK**

**SPACE FOR ROUGH WORK**

DO NOT OPEN THIS QUESTION BOOKLET UNTIL YOU ARE ASKED TO DO SO

**2018** | **Question Paper Version Code**

# QUESTION BOOKLET

# SPECIFIC PAPER

## PAPER-II

**A**

**Time Allowed : 2 Hours** | **SUBJECT CODE : 347** | **Maximum Marks : 200**

## INSTRUCTIONS

1. Immediately after the commencement of the Examination, you should check that this Qustion Booklet does NOT have any unprinted or torn or missing pages or questions etc. If so, get it replaced by a complete 'Question Booklet' of the same Question Paper Version Code as printed in your OMR Answer Sheet.
2. **Candidate has to ensure that Question Paper Version Code of the Question Booklet given is same as the Question Paper Version Code printed on OMR Answer Sheet. Discrepancy, if any, should be reported to the Invigilator and a new Question Booklet should be taken whose Question paper Version Code tallies with the Question Paper Version Code printed on the OMR Answer Sheet.**
3. You have to enter your Register Number in the Question Booklet in the box provided alongside. DO NOT write anything else on the Question Booklet.

| Register Number | | | | | | |
|---|---|---|---|---|---|---|
| | | | | | | |

4. **This Question Booklet contains 100 questions.** Each question contains **four** responses (answers). Select the response which you want to mark on the Answer Sheet. In case you feel that there is more than one correct response, mark the response which you consider the most appropriate. In any case, choose ONLY ONE RESPONSE for each question.
5. All the responses should be marked ONLY on the separate OMR Answer Sheet provided and ONLY in **Black** or **Blue Ball Point Pen**. See detailed instructions in the OMR Answer Sheet.
6. All questions carry equal marks. **Attempt all questions**. Every question for which wrong answer has been given by the candidate, $1/4^{th}$ (0.25) of the marks assigned for that question will be deducted.
7. Sheets for rough work are appended in the Question Booklet at the end. You should not make any marking on any other part of the Question Booklet.
8. Immediately after the final bell, indicating the conclusion of the examination, stop making any further markings in the OMR Answer Sheet. Be seated till the OMR Answer Sheets are collected and accounted for by the Invigilator.

**Possession of Mobile Phones, Calculators and other Electronic/Communication gadgets of any kind is prohibited inside the Examination venue.**

ಗಮನಿಸಿ : ಸೂಚನೆಗಳ ಕನ್ನಡ ಆವೃತ್ತಿಯು ಈ ಪ್ರಶ್ನೆಪತ್ರಿಕೆಯ ಮುಂಭಾಗದಲ್ಲಿ ಮುದ್ರಿಸಲ್ಪಟ್ಟಿದೆ.